ಖಿ ಡಿ ಪ್ರ ತಿ ೩ ಪೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
೧ ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ ಪಿ. ಪದ್ಧತಿ ಇಲ್ಲ.
ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೆ.

Office—Chamaraja Agrahar, Mysore
ಆಫೀಸ್—ಚಾಮರಾಜ ಅಗ್ರಹಾರ ಮೈಸೂರು

Regd. No. M. 1299

SATYAVADI

"ಸತ್ಯವಾದಿ" ವಾರಪತ್ರಿಕೆ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೨೨ ನೇ ಮೇ ೧೯೨೫. [ಸಂಚಿಕೆ ೨೨

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಿಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು.

"ಸಾಲಾಮಿಸ್ರಿ" ಎಂಬುವುದು ಕಾಬೂಲ್ ಎದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ಸಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿನಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೪ ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವುವು. ಅನುಪಾನ ಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0
ಪಾರ್ಸಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8 ಣೆ. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು

ಖಂತಿ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ.
ವಿಳಾಸ—ಡಿ ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೊ,
ಬೆಂಗಳೂರು ಸಿಟಿ

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷ್ಟ್‌ಗಳು ಬಹು ಚೆಲ್ಲೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡ ಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗಾರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬುದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ,

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು,

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD
For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಯಿಂಟಿಂಗ್ ಎನ್‌ಲಾರ್ಜಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 15-12 ಸೈಜು ಎನ್‌ಲಾರ್ಜು ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುವಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

“ ಸ ತ್ಯ ವಾ ದಿ ”

೨೨ ನೆ ಮೇ ೧೯೨೫

ಹಿಂದೂ ಮುಸಲ್ಮಾನರ ಸ್ನೇಹ ಶತಮಾನ ಪುರಾತನ.

ಮೊಗಲ್ ಚಕ್ರವರ್ತಿಯಾದ ಔರಂಗಜೇಬನು ಉತ್ತರ ಹೋರಿನಲ್ಲಿಯೂ, ಕಾಶಿಯಲ್ಲಿಯೂ ಮಸೀದಿಗಳನ್ನು ಕಟ್ಟಿದ ಕಾಲಕ್ಕೆ, ಈ ಪ್ರಕಾರವಾದ ಸಂದೇಶವನ್ನು ಕೊಟ್ಟಿರುವನೆಂದು ‘ಇಸ್ಲಾಮಿಕ್ ರಿವ್ಯೂ’ ಎಂಬ ಪತ್ರಿಕೆಯು ಪ್ರಕಟಿಸಿದೆ.

“ನಮ್ಮ ಪ್ರಜೆಗಳೆಲ್ಲರೂ, ಯಾವ ಸ್ಥಿತಿಯಲ್ಲಿರುವವರಾದರೂ ಸರಿ ಒಬ್ಬರಲ್ಲೊಬ್ಬರು ಪ್ರೀತಿವಿಶ್ವಾಸಗಳಿಂದ ಕೂಡಿದವರಾಗಿರಬೇಕೆಂತಲೂ, ಇಸ್ಲಾಂಮತ ಪ್ರಕಾರ ಹಿಂದೂಗಳ ದೇವಾಲಯಗಳನ್ನು ಕಾಪಾಡಬೇಕೆಂತಲೂ ಈ ಮೂಲಕ ತಿಳಿಯಪಡಿಸಿರುತ್ತೇವೆ. ಕೆಲವರು ಬ್ರಾಹ್ಮಣರನ್ನು ಕಾಶಿಕ್ಷೇತ್ರದಲ್ಲೂ ಮತ್ತು ಇತರ ಸ್ಥಳಗಳಲ್ಲಿಯೂ ತೊಂದರೆಪಡಿಸುತ್ತಿರುವದಾಗಿ ತಿಳಿಯ ಬರುತ್ತಿದ್ದರಿಂದಲೂ; ಇದರಿಂದ ಚಕ್ರಾಧಿಪತ್ಯದ ಶಾಂತತೆ ಕೆಡುವ ಸಂಭವವಿರುವುದರಿಂದಲೂ, ನಾವು ಈಗ ಆಜ್ಞಾಪಿಸುವುದೇನೆಂದರೆ—ನಮ್ಮ ಆಧಿಪತ್ಯದಲ್ಲೆಲ್ಲೇ ಆದರೂ ಬ್ರಾಹ್ಮಣರನ್ನು ತೊಂದರೆಪಡಿಸಕೂಡದು. ಅವರವರಿಗೆ ಅವರವರ ಮತಾಚಾರಗಳಲ್ಲಿ ಸ್ವಾತಂತ್ರ್ಯವಿರುವುದರಿಂದ ದೇವಾಲಯಗಳನ್ನು ನಾಶಮಾಡಬಾರದು. ನಮ್ಮ ಹಿಂದೂ ಪ್ರಜೆಗಳು ಶಾಂತತೆಯಿಂದ ಜೀವಿಸುತ್ತಿದ್ದು, ನಮ್ಮ ಶ್ರೇಯಸ್ಸಿಗೆ ಅರ್ಹರಾಗಿರ್ವದಿಸುತ್ತಿರಲಿ.”

ಈ ಮೇಲ್ಕಂಡ ಪಾದಷಹಾವಿನ ಫರಮಾನೆಯಿಂದ ಸ್ಪಷ್ಟಪಡುವುದೇನಂದರೆ ಚರಿತ್ರಕಾರರು ಬರೆದಿರುವ ಚರಿತ್ರೆಯಲ್ಲಿ ಮುಸಲ್ಮಾನರು ಬಹು ಕ್ರೂರಾತ್ಮಿಗಳಿಂದೂ ಹಿಂದೂಗಳನ್ನು ದ್ವೇಷಿಸುತ್ತಿದ್ದರೆಂದೂ ಪ್ರಕಟಿಸಿ ದ್ವೇಷವನ್ನು ಹೆಚ್ಚಿಸಲು ಕಾರಣರಾಗಿದ್ದರೇ ವಿನಃ ಆ ಕಾಲದಲ್ಲಿನ ನಿಜಾಂಶವನ್ನು ಹೊರಪಡಿಸಿರುವುದಿಲ್ಲ. ಆದರೆ ಆಧುನಿಕ ಚರಿತ್ರೆ ಶೋಧಕರು ಪರೀಕ್ಷಿಸಿದರಿಂದ ಈ ಫರಮಾನೆಯಿಂದ ಹಿಂದಿನ ಹೇಳಿಕೆಯನ್ನು ಪ್ರತಿಭಟಿಸಿ ಶತಮಾನಗಳ ಹಿಂದೆಯೇ ಮೊಗಲ ಚಕ್ರವರ್ತಿಗಳ ಕಾಲದಲ್ಲಿ ಭರತಖಂಡದ ಹಿಂದೂ ಜನಗಳ ಸಂಗಡ ಸ್ನೇಹಿತರಾಗಿದ್ದರೆಂದೂ ಸರ್ವಥಾ ತೊಂದರೆ ಪಡಿಸದಂತೆ ಅವರ ಕ್ಷೇಮವೇ ತಮ್ಮ ಕ್ಷೇಮವೆಂದು ಹಿಂದೂಗಳನ್ನು ಕಾಪಾಡಿ ತ್ತಾ ರಾಜ್ಯಭಾರಮಾಡುತ್ತಾ ಇದ್ದರೆಂದು ತಿಳಿಸುತ್ತಾರೆ. ಈಗ ಸ್ವರಾಜ್ಯ ಸ್ಥಾಪನೆಗೆ ಬದ್ಧಕಂಕಣರಾದವರ ಸಂದೇಶವು ನಮಗೆ ನೂತನವಾದುದಲ್ಲ. ಕಾಲಯಾಪನೆಯಿಂದ ಮತ್ತು ಸಪನಾಗರಿಕತೆಯಲ್ಲಿ ಮಳಿಗಿ ಜ್ಞಾನಾಂಧರಾದವರಿಗೆ ಈ ಉಪದೇಶವು ನೂತನವಾದ ದೆಂದು ತೋರುವುದು.

—ಜೈನಾದಲ್ಲಿ ಕ್ರಿಚೋಪ್ಯಾಂತ್ಯದಲ್ಲಿ ವಿಪರೀತ ಕ್ಷಾಮು ಪ್ರಾಪ್ತವಾಗಿದೆ. ಈಚೆಗೆ ಇಲ್ಲಿನ ಜನರು ಹೊಟ್ಟೆಗೆ ಬರೀ ಹುಲ್ಲನ್ನೂ ಎಲೆಗಳನ್ನೂ ತಿನ್ನಲುಪಕ್ರಮಿಸಿದರು. ಮಾತಾಪಿತೃಗಳು ಮಕ್ಕಳನ್ನು ಒಂದುಹಿಡಿ ಧಾನ್ಯಕ್ಕೆ ವಿಕ್ರಯಿಸುತಿದ್ದಾರೆ. ಕಿರ್ಯಸ್ ಹತ್ತಿರ ನರಮಾಂಸ ಭಕ್ಷಣೆಗೂ ಕೂಡ ಉಪಕ್ರಮಿಸಿರುತ್ತಾರೆ.

ಬರೋಡಾ ಸುಂದರಿ ಅಪಹರಣ.

— ಇನ್ಸ್ಪೆಕ್ಟರ್ ಸಾಹೇಬನ ಅತ್ಯಾಚಾರ —

ಸುಂದರಿಗೆ ಹಾಕಲ್ಪಟ್ಟ ಮತ್ತೂ ಕೆಲವು ಪ್ರಶ್ನೆಗಳಿಗೆ ಅವಳು ಉತ್ತರವಾಗಿ, ತಾನು ತನ್ನ ಗಂಡ ಮತ್ತು ಕೆಲವು ಸಾಕ್ಷಿಗಳು ಪೋಲೀಸು ಸ್ಟೇಷನ್ನಿಗೆ ಹೋದೆವು. ಆಗ ಸಾಯಂಕಾಲ, ಮೊಬ್ಬುಕತ್ತಲೆಯು ಆವರಿಸಿಕೊಂಡಿತ್ತು. ನಮ್ಮೆಲ್ಲರನ್ನೂ ಗೈಬಂಧನ ಪೋಲೀಸು ಇನ್ಸ್ಪೆಕ್ಟರಾದ ಹೇಮಚಂದ್ರಸೇರವರ ಬಳಿಗೆ ಕರೆದುಕೊಂಡುಹೋದರು. ಇನ್ಸ್ಪೆಕ್ಟರ್ ಮಹಾಶಯನು ನನ್ನ ಮತ್ತು ನನ್ನ ಗಂಡನ ವಿನಃ ಉಳಿದವರಿಗೆ ಹೊರಟುಹೋಗಲು ಅಪ್ಪಣೆಕೊಟ್ಟು ನಂತರ ನನ್ನಲ್ಲಿ ಒಂದು ಏಕಾಂತವಿಷಯ ಮಾತಾಡಬೇಕೆಂದು ಹೇಳಿ ನನ್ನ ಗಂಡನನ್ನೂ ಹೋಗುವಂತೆ ಅಪ್ಪಣೆಮಾಡಿದನು. ಅದೇ ಪ್ರಕಾರ ನನ್ನ ಗಂಡನು ಹೊರಟುಹೋದನು.

ಪ್ರ—ನಂತರ ವಿನು ನಡೆಯಿತು ?

ಉ—ಅಲ್ಲಿದ್ದ ದರೋಗನು ನನ್ನನ್ನು ಕುರಿತು ‘ಈಗ ಇನ್ಸ್ಪೆಕ್ಟರ್ ಸಾಹೇಬರು ನಿನಗೆ ಒಂದು ಕೆಲಸವನ್ನು ಮಾಡಬೇಕೆಂದು ಹೇಳುತ್ತಾರೆ. ನೀನು ಅವರು ಹೇಳಿದಂತೆ ನಡೆದುಕೊಳ್ಳಬೇಕು’ ಎಂದು ಹೇಳಿದನು. ನಾನು ಹಾಗೆ ಮಾಡುವುದಿಲ್ಲವೆಂದು ಕಂಠೋಕ್ತವಾಗಿ ಹೇಳಿದೆನು. ಆಗ ದರೋಗನ ಅಪ್ಪಣೆಪ್ರಕಾರ ಒಬ್ಬ ಕಾನ್ಸ್ಟೇಬಲನು ನನ್ನನ್ನು ಬೆತ್ತದಿಂದ ಹೊಡೆಯುವುದಕ್ಕಾರಂಭಿಸಿದನು. ಆದರೆ ಇನ್ಸ್ಪೆಕ್ಟರನು ಹೊಡೆಯುವುದನ್ನು ನಿಲ್ಲಿಸುವಂತೆ ಹೇಳಿ ಅವರಿಬ್ಬರನ್ನೂ ಕೊಠಡಿಯಿಂದ ಹೊರಗೆ ಹೋಗುವಂತೆ ಹೇಳಿದನು.

ಈ ಸಮಯದಲ್ಲಿ ಸುಂದರಿಯ ಬಾಯಿಂದ ಮಾತು ಹೊರಡದು. ಮನಸ್ಸಿನ ಕಳವಳದಿಂದಲೂ, ನಾರೀ ಮಣಿಗೆ ಸಹಜವಾದ ಲಜ್ಜೆಯಿಂದಲೂ ಇನ್ಸ್ಪೆಕ್ಟರನು ತನ್ನ ಮೇಲೆ ನಡಿಸಿದ ಅತ್ಯಾಚಾರವನ್ನು ನೆನೆದುಕೊಂಡು ನಡುಗಲಾರಂಭಿಸಿದಳು. ಸ್ವಲ್ಪ ಹೊತ್ತಾದ ನಂತರ ತನ್ನ ಮನಸ್ಸಿನ ಉದ್ವೇಗವನ್ನು ಶಮನಮಾಡಿಕೊಂಡು, ಅವಳು, ತಾನು ಎಷ್ಟು ಅಡ್ಡಿಮಾಡಿದರೂ ಮತ್ತು ತನ್ನ ಮಾನಭಂಗ ಮಾಡಬೇಡವೆಂದು ಎಷ್ಟು ವಿಧವಾಗಿ ದೈನ್ಯದಿಂದ ಬೇಡಿಕೊಂಡರೂ ಕೇಳದೆ ಇನ್ಸ್ಪೆಕ್ಟರ್ ಹೇಮಚಂದ್ರಸೇನನು ತನ್ನ ಮೇಲೆ ನಡೆಸಿದ ದುರಾಚಾರವನ್ನು ವಿಸ್ತಾರವಾಗಿ ಹೇಳಿದಳು.

ಪ್ರ—ನೀನು ಆ ರಾತ್ರಿಯೆಲ್ಲಾ ಆ ಬಂಗ್ಲೆಯಲ್ಲಿಯೇ ಇದ್ದೆಯೋ ?

ಉ—ಇಲ್ಲ. ಸಮರಾತ್ರಿ ಸುಮಾರು ಒಂದು ಗಂಟೆಯ ಸಮಯದಲ್ಲಿ ನನ್ನನ್ನು ಒಬ್ಬ ಚೌಕಿದಾರನ ಸಂಗಡ ಪೋಲೀಸು ಸ್ಟೇಷನ್ನಿಗೆ ಕಳುಹಿಸಿದನು. ಅಲ್ಲಿ ನನ್ನ ಗಂಡನಿದ್ದನು. ಆತನಿಗೆ ಬಂಗ್ಲೆಯಲ್ಲಿ ನಡೆದ ವಿಷಯವನ್ನೆಲ್ಲಾ ತಿಳಿಸಿದೆನು.

ಪ್ರ—ನೀನು ಮನೆಗೆ ಹಿಂದಿರುಗಿ ಯಾವಾಗ ಬಂದೆ

ಉ—ಮಾರನೆದಿನ ಪ್ರಾತಃಕಾಲ ನಾವು ಪೋಲೀಸು ಸ್ಟೇಷನ್ನಿನಿಂದ ಹೊರಟೆವು. ಡಿಸ್ಟ್ರಿಕ್ಟ್ ಬೋರ್ಡ್ ಮಾರ್ಗದಲ್ಲಿ ಬೈಸಿಕಲ್‌ಗಳ ಮೇಲೆ ಅಮಲಗಾಜಿಗೆ ಹೋಗುತ್ತಿದ್ದ ಇನ್ಸ್ಪೆಕ್ಟರನನ್ನು ಸಬ್ ಇನ್ಸ್ಪೆಕ್ಟರನನ್ನೂ ನೋಡಿದೆವು.

ಪ್ರ—ಇನ್ಸ್ಪೆಕ್ಟರನೂ ಮತ್ತು ದರೋಗ ಇಬ್ಬರನ್ನಿನ್ನನ್ನು ಪರೀಕ್ಷಿಸಿದರೋ ?

ಉ—ಇಲ್ಲ.

ಪ್ರ—ಗುರುವಾರದದಿನ ವಿನು ನಡೆಯಿತು.

ಉ—ನನ್ನನ್ನು ಕರೆದುಕೊಂಡುಹೋದ ಸ್ಥಳಗಳನ್ನು ತೋರಿಸುವುದಕ್ಕೋಸ್ಕರ ದರೋಗನು ನನ್ನನ್ನು ಮನೆಯಿಂದ ಮನೆಗೆ ಕರೆದುಕೊಂಡುಹೋದನು. ಗುರುವಾರದದಿನವೂ ಮತ್ತು ಬರುವ ಮೂರು ದಿನಗಳಲ್ಲೂ ನನ್ನನ್ನು ಕರೆದುಕೊಂಡುಹೋದ ಬೇರೆಬೇರೆ ಸ್ಥಳಗಳನ್ನೂ ಮತ್ತು ನಿರ್ಬಂಧಪಡಿಸಿದ ಸ್ಥಳವನ್ನು ದರೋಗನಿಗೂ ಮತ್ತು ಇತರ ಸಾಕ್ಷಿಗಳಿಗೂ ತೋರಿಸಿದೆನು. ನನ್ನನ್ನು ಒಂದು ಮನೆಯೊಳಗೆ ಕರೆದುಕೊಂಡು ಹೋಗುವುದಕ್ಕೆ ಪೂರ್ವಭಾವಿಯಾಗಿ, ದರೋಗನು ಕೊಠಡಿಯಲ್ಲಿ ಇರಬಹುದಾದ ಕೆಲವು ಚಿಲ್ಲರೆ ಸಾಮಾನುಗಳ ವಿಷಯವಾಗಿ ಕೇಳಿದನು.

ಪ್ರ—ಈಚೆಗೆ ನೀನು ಇನ್ಸ್ಪೆಕ್ಟರನ್ನು ನೋಬೇಡ ಕೆಂದು ಯಾರಾದರೂ ಹೇಳಿದರೋ ?

ಉ—ಇನ್ಸ್ಪೆಕ್ಟರನು ಪುನಃ ತನ್ನನ್ನು ಪಲಾಷ್ ಜಾರ ಪೋಲೀಸು ಸ್ಟೇಷನ್ನಿನಲ್ಲಿ ನೋಡಬೇಕೆಂದು ನನಗೆ ಹೇಳಿಕಳುಹಿಸಿರುವನೆಂದು ನನ್ನ ಗಂಡನಿಂದ ತಿಳಿದೆನು. ಆದರೆ ನಾನು ಹೋಗಲಿಲ್ಲ.

ಪ್ರ—ಏತಕ್ಕೆ ಹೋಗಲಿಲ್ಲ ?

ಉ—ನಾನು ಹೋಗದಿರುವದಕ್ಕೆ ಕಾರಣವನ್ನು ಕೇಳಿದಾಗ, ನಾನು ವೇಶ್ಯಾಂಗನೆಯಲ್ಲವೆಂದೂ, ನಾನು ಅಲ್ಲಿಗೆ ಹೋಗುವುದಿಲ್ಲವೆಂದೂ, ನನ್ನ ಮೊಖದ್ದಮೆಯು ಹಾಳಾಗಿಹೋದರೂ ನಾನು ಅಲ್ಲಿಗೆ ಹೋಗುವುದಿಲ್ಲವೆಂದೂ ಹೇಳಿದೆನು.

— ಅಪಹರಣಕ್ಕೆ ಹಿಂದೆ ನಡೆದ ವಿಷಯ —

ತನ್ನನ್ನು ಅಪಹರಿಸುವುದಕ್ಕೆ ಮೊದಲು ಇನ್ನೇನಾದರೂ ವಿಶೇಷ ಸಂಗತಿಗಳು ನಡೆದವೆಂದು ಕೇಳಲಾಗಿ ಅವಳು ಮೊದಲನೆಯದು, ಫಾಲ್ಗುಣ ಮಾಸ ಶುಕ್ಲ ತಾರೀಖಿನಲ್ಲಿ ಕೆಲವು ಜನರು ತನ್ನ ಗಂಡನಾವನ ಮನೆಯನ್ನು ಪ್ರವೇಶಿಸಿ ಆತನು ಮುಕೊಟಡಿಯ ಹಿಂಭಾಗದಲ್ಲಿ ಅವಿತುಕೊಂಡರು, ವನು ಅಕಸ್ಮಾತ್ತಾಗಿ ಅವರನ್ನು ನೋಡಿ ಗದ್ದಲಹಬ್ಬಿಸಲು ನೆರೆಹೊರೆಯವರು ಈತನ ಮನೆ ಕಡೆ ಓಡಿ ಹೋದರು ಕೇಶವನಿಗೂ ಮತ್ತು ನೆರೆಯ ಸ್ನೇಹಿತನಾದ ಶುಕ್ತನೆಂಬುವನಿಗೂ ಆಗಂತುಕರ ಲತಿಯಿಂದ ಪೆಟ್ಟು ಬಿದ್ದು ಸ್ವಲ್ಪ ಗಾಯವಾಯಿತು.

ಎರಡನೆಯದು ಜ್ಯೈತ್ರಮಾಸದ ಮೊದಲನೆಯ ತಾರೀಖಿನಲ್ಲಿ ನಡೆಯಿತು. ಇದು ಅವಳ ಅಪಹರಣಕ್ಕೆ ಒಂದು ವಾರಕ್ಕೆ ಮೊದಲು ನಡೆದುದು. ಆ ದಿನ ಇವಳೂ ಇವಳ ಗಂಡ ಕೇಶವನೂ ಕೆಲವು ಹಳ್ಳಿಯವರೊಂದಗೂಡಿ ವರುಣಿ ಸ್ನಾನ ಮಾಡುವುದಕ್ಕೋಸ್ಕರ ‘ಕಾಂಟೋವ’ಕ್ಕೆ ಹೋಗಿದ್ದರು. ಅಲ್ಲಿ ವಿನೋನೆಂಬುವನು, ಕೆಲವು ಜನರು, ಅವರಲ್ಲಿ ಕೆಲವು ಜ ಅಪರಾಧಿಗಳೂಸಹ, ಇವರ ವಿಷಯವಾಗಿ ವಿಚಾರಿತ್ತಿದ್ದರೆಂದೂ, ಕೇಶವ ಮತ್ತು ಈತನ ಹೆಂಡತಿ ಸೋರಿಯರಿಬ್ಬರೂ ಆಲ್ಲಿಯೇ ಆ ರಾತ್ರಿ ತಂಗುತ್ತಾರೆಯೆ ಇಲ್ಲವೇ ಎಂಬ ಸಂಗತಿಯನ್ನೆ ವಿಚಾರಿಸುತ್ತಿದ್ದರೆಲೂ ಹೇಳಿದನು, ಈ ಸಮಾಚಾರವನ್ನು ಕೇಳಿದಡನೆ ಅವರಿಗೆ ಭೀತಿಯುಂಟಾಗಿ ತತ್‌ಕ್ಷಣವೇ ತಿರುಗಿ ಮನೆಗೆ ಬಂದು ಬಿಟ್ಟರು. ಅವರು ಹಿಂದಿರಿಬರುತ್ತಿರುವಾಗ ಕಮರಪುರದ ಸಂತೆಕೂಡುವ ಸ್ಥಳದಲ್ಲಿ ಕುಳಿತಿದ್ದ ಜೋಟಜಿಸರಟ್, ಜಬ್ಬಾರ್ ಟಾಸ್

ಮತ್ತು ಕೆಲವು ಜನರನ್ನು ನೋಡಿದರು. ಪ್ರಾಸಿಕ್ಯೂಷನ್ ತರಫು ತನಿಖೆಯಾದನಂತರ ಅಪರಾಧಿಕಡೆ ಲಾಯರು ಬಕೋಡ ಸುಂದರಿಯನ್ನು ನಾಲ್ಕು ಗಂಟೆಗಳ ದೀರ್ಘ ಕಾಲ ಫಾಬಿಸವಾಲ್ ಮಾಡಿದರು ಹಿಂದೆ ಹೇಳಿರುವ ಹೃದಯದ್ರವೇದಕವಾದ ಮತ್ತು ಅಸಹ್ಯವಾದ ಸಂಗತಿಗಳು ಪುನರುಕ್ತಿಯಾದವೇ ಹೊರತು ಹೆಚ್ಚು ಸಂಗತಿಗಳೇನೂ ಹೊರಬೀಳಲಿಲ್ಲ.

ಕಳೆದವಾರ ವೆಲ್ಲಂಡ ನೊಕದ್ದಮೆಯ ವಿಚಾರಣೆ ಪೂರ್ತಿಯಾಗಿ, ಅಪರಾಧಿಗಳು ಲ ಜನರಿಗೂ ೩ ವರ್ಷದಿಂದ ೬ ವರ್ಷಪರ್ಯಂತ ಅವರವರ ತಕ್ಸೀರಿಗೆ ತಕ್ಕಂತೆ ಕಠಿಣ ಸಜಾ ವಿಧಿಸಲಾಯಿತೆಂದು ತಿಳಿಯ ಬಂದಿದೆ.

ವೃತ್ತಾಂತ ಸಂಗ್ರಹ

——

—ಒಬ್ಬಾಸೊಬ್ಬ ಬಾತ್ಮೀದಾರನು ಮಹಾತ್ಮಾ ಗಾಂಧಿಯವರನ್ನು ನೀವು ನಿಮ್ಮ ಸ್ವಂತ ಖರ್ಚಿಗೂ ನಿಮ್ಮ ಸಂಚಾರಕ್ಕೂ ಕಾಂಗ್ರೆಸ್ ಕಮಿಟಿ ಹಣವನ್ನು ಉಪಯೋಗಿಸಿಕೊಳ್ಳುತ್ತೀರಾ ಎಂದು ಕೇಳಿದ್ದಕ್ಕೆ, ಮಹಾತ್ಮರು ಈ ರೀತಿ ತಿಳಿಸಿರುತ್ತಾರೆ

" ನಾನು ಯಾವ ಕಾಂಗ್ರೆಸ್ ಹಣವನ್ನೂ ಉಪಯೋಗಿಸಿಕೊಳ್ಳುವದಿಲ್ಲ. ನನಗೆ ನನ್ನ ಮಿತ್ರರೇ ಕರು ಸಂಚಾರದ ಖರ್ಚನ್ನು ಕೇಳದೇಲೇ ಒದಗಿಸಿಕೊಡುತ್ತಾರೆ. ನನಗೆ ಬೇಕಾದ್ದಕ್ಕಿಂತ ಹೆಚ್ಚಾಗಿ ಖಾದಿ ಬಟ್ಟೆಯನ್ನು ನನ್ನ ಮಿತ್ರರು ತುಂಬಿ ಕೊಡುತ್ತಾರೆ. ನನಗೆ ಹೆಚ್ಚಾದುದನ್ನು ಆಶ್ರಮದಲ್ಲಟ್ಟು ಬೇಕಾದವರ ಉಪಯೋಗಕ್ಕೆ ಸಿಕ್ಕುವುವುಗಳಾಗಿವೆ. ನನಗೆ ಸ್ವಂತ ಆಸ್ತಿ ಏನೂ ಇಲ್ಲ. ಆಶ್ರಮವೂ ಸ್ವಂತದಲ್ಲೆಲ್ಲಾ ನಾನೇ ಐಶ್ವರ್ಯವಂತನೆಂದು ಭಾವಿಸುತ್ತೇನೆ. ಯಾಕೆಂದರೆ ನನ್ನ ಸ್ವಂತಕ್ಕಾಗಲೀ ಇತರರ ಉಪಯೋಗಕ್ಕಾಗಲೀ ನನಗೆ ಏನೂ ಬೇಕಾಗಿಲ್ಲ

——

—ಲಂಡನ್ನಿನ ಟ್ರೊಕಡೆರೋ ಹೋಟಲಿನಲ್ಲಿ ಪ್ರೆಸ್ ಅಸೋಸಿಯೇಷನ್ನಿನ ಔತಣದ ಕಾಲದಲ್ಲಿ ತುಂಬಾ ಅಗರ್ಭಿತವಾದ ಮತ್ತು ಹೃದಯದ್ರವಕವಾದ ಸಂಗತಿಯು ನಡೆಯಿತು. ಅಧ್ಯಕ್ಷರಾಗಿದ್ದ ಜ್ಯೂ ವೈಟರವರು ಭಾಷಣಮಾಡಿ, ಸಂತರ ನಾವು ತಿಂದು ಕುಡಿಯೋಣ, ಏತಕ್ಕೆಂದರೆ, ನಾಳೆ ಸಾಯುತ್ತೇವೆ ಎಂದು ಹೇಳಿದರು. ಆನಂತರ ಅವರು " ನಾನು ಹೇಳುತ್ತೇನೆಯೆ ? ಎಂದು ಹೇಳಿ ಇಲ್ಲ ಕೈತೆಗೆದುಕೊಳ್ಳಿ, ಮತ್ತು ಸಹಾಯವಾಡಿರಿ. ಯಾತಕ್ಕೆಂದರೆ ಈವತ್ತು ನಾವು ಜೀವಿಸಿರುತ್ತೇವೆ!!! ಎಂದು ತಿಳಿಸಿದರು. ಕೂಡಲೆ ಕುರ್ಚಿಯಿಂದ ಹಿಂದಕ್ಕೆ ಬಿದ್ದು ಪ್ರಾಣಬಿಟ್ಟರು.

ಈಗಿರುವ ೧೨ ತಿಂಗಳ ಕ್ಯಾಲೆಂಡರನ್ನು ಬದಲಾಯಿಸಿ, ವರ್ಷಕ್ಕೆ ೨೮ ದಿವಸಗಳನ್ನೊಳಗೊಂಡ ೧೩ ತಿಂಗಳುಗಳನ್ನು ಇಡಬೇಕೆಂದು ಲೀಗ್ ಆಫ್ ನೇಷನವರು ಯೋಚಿಸಿರುತ್ತಾರೆ. ಇದನ್ನು ಬ್ರಿಟಿಷ್ ಟ್ರಿ ಕಂಪೆನಿಗಳು ಅನುಮೋದಿಸಿವೆ.

ಅಮೇರಿಕಾದಲ್ಲಿ ಪತ್ರಿಕಾ ಅಭಿವೃದ್ಧಿಯು ಬಹು. ಅಲ್ಲಿ ಪ್ರಕಟವಾಗುವ ದೈನಂದಿನ ಪತ್ರಿಕೆ ,, ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಗೆ ದಿನಕ್ಕೆ ಟ್ಟ ಕಾಗದ, ೪ ಟ್ಟ ಶಾಯಿ ಬೇಕಂತೆ! ನಡರ ಖರ್ಚೇ ವರ್ಷಕ್ಕೆ ಸುಮಾರು ೧೬೦ ಪಾಯಿ ಆಗುವುದಂತೆ!

ನಡಾಗಿರುವವರು ಕೂಡಾ ಉಪನ್ಯಾಸ ಮುಂ ನವುಗಳನ್ನು ಕೇಳಲು, ಅನುಕೂಲಿಸುವಂತೆ ಡಾ. ಟರ್ ಗಾಲ್ಟೆಯವರು ಒಂದು ನೂತನ ಯಂತ್ರ ಹಿಡುಹಿಡಿದಿರುವರು. ಇದನ್ನು ಕೈಯಲ್ಲಿಯಾಗಲೀ ಈ ದೇಹದ ಇತರ ಯಾವ ಸೂಕ್ಷ್ಮ ಭಾಗದ ಲೀ ಇಟ್ಟಲ್ಲಿ ಜೆನ್ನಾಗಿ ಕೇಳುತ್ತದಂತೆ

ಎವರೆಸ್ಟ್ ಶಿಖರವನ್ನು ಹತ್ತಬೇಕೆಂಬುದು ನಾಗರಿಕ ಜನಾಂಗದ ಆಶೆಯಲ್ಲಿ ಒಂದಾಗಿದೆ. ಬ್ರಿಟಿಷ್ ರವರು ೨—೩ ಆವೃತ್ತಿ ಪ್ರಯತ್ನಿಸಿದರು, ಆದರೆ ವಿಫಲವಾಯಿತು. ಈಗ ಈ ಆಶೆಯು ಜರ್ಮನಿಗೆ ಹತ್ತಿದೆ. ಜರ್ಮನ್ ಆಲ್ಪೈನ್ ಕ್ಲಬ್ಬಿನವರು ಎಲ್ಲಾ ವಿಷಯದಲ್ಲೂ ಸಿದ್ಧಪಡಿಸಿಕೊಂಡಿರುವರು. ಬ್ರಿಟಿಷ್ ಮತ್ತು ನೇಪಾಲ ಸರ್ಕಾರದವರನ್ನು ಈ ಸಂದರ್ಭದಲ್ಲಿ ರಹದಾರಿ ಕೊಡಲು ಕೇಳಿಕೊಂಡಿರುವರು ರಹದಾರಿ ಸಿಕ್ಕುತ್ತದೋ ಇಲ್ಲವೋ ನೋಡಬೇಕು. ಮತ್ತು ಈ ಸಾಹಸದ ವಿಷಯದಲ್ಲಿ ಬ್ರಿಟಿಷರು ತುಂಬಾ ನಷ್ಟ ಮತ್ತು ಪ್ರಯಾಸಪಟ್ಟು ವಿಮುಖರಾಗಿರುವುದರಿಂದಲೂ ರಹದಾರಿ ಸಿಗುವ ಸಂಭವ ಕಡಿಮೆಯಾಗಿರುವುದರಿಂದಲೂ ಜರ್ಮನಿ ಪತ್ರಿಕೆಗಳು ಈ ಸಂದರ್ಭದಲ್ಲಿ ಒಳ್ಳೆಯ ಅಭಿಪ್ರಾಯವುಳ್ಳವುಗಳಾಗಿಲ್ಲ.

——

—ಅಮೆರಿಕಾದಲ್ಲಿ ಒಂದು ಕೃಷಿಕ್ಷೇತ್ರವು ೧೦೦ ಮೈಲಿ ಉದ್ದವಿದೆಯಂತೆ. ೩೬ ಲಕ್ಷ (Bhigas) ವ್ಯವಸಾಯಕ್ಕಾಗಿ ಉಪಯೋಗಿಸಲ್ಪಡುತ್ತಿದೆಯಂತೆ ಪ್ರಪಂಚದಲ್ಲೆಲ್ಲಾ ಇದೇ ದೊಡ್ಡ ವ್ಯವಸಾಯ ಕ್ಷೇತ್ರ. ಪ್ರತಿವರ್ಷವೂ ಒಂದು ಲಕ್ಷಕ್ಕೆ ಹೆಚ್ಚಾಗಿ ಕರುಗಳು ಸೇರಿಸಲ್ಪಡುತ್ತಿವೆಯಂತೆ.

——

—ಆಗ್ರಾದಲ್ಲಿ ಒಬ್ಬ ಹಿಂದೂ ಕಂಟ್ರಾಕ್ಟುದಾರನ ಮಗನು ದಾರಿಯಲ್ಲಿ ಬರುತ್ತಿರುವಾಗ ಒಬ್ಬ ಕಟುಕರವನೂ ಅತನ ಇಬ್ಬರು ಸ್ನೇಹಿತರೂ ಸೇರಿ ಆ ಹುಡುಗನನ್ನು ತನ್ನಲ್ಲಿದ್ದ ಕಟುಕರ ಮಚ್ಚಿನಿಂದ ಕತ್ತರಿಸಿ ಹಾಕಿದನು. ಕೂಡಲೆ ದಸ್ತಗಿರಿಮಾಡಲ್ಪಟ್ಟನು.

——

—ಇಲಿಗಳ ಹಾವಳಿಯಿಂದ ಇಂಗ್ಲೆಂಡು ದೇಶ ಒಂದಲ್ಲೇ ಕಟ್ಟಡ ಮತ್ತು ಆಹಾರ ಧಾನ್ಯದ ಲಕ್ಸಾನು ಸುಮಾರು ೫೦೦ ಕೋಟಿ ಆಗುವುದಂತೆ. ಇಲಿಯು ಸಾಲದ ಕಡಿಮೆಗೆ ಸಾಂಕ್ರಾಮಿಕ ಜಾಡ್ಯಗಳನ್ನೂ ಹರಡಲು ತುಂಬಾ ಮೆಹನತ್ತುಮಾಡಿ ದೇಶಕ್ಕೆ ತೊಂದರೆ ಹೆಚ್ಚಿಸುತ್ತದೆ. ಇಲಿಗಳು ಹೇರಳವಾಗಿ ಮರಿಗಳನ್ನು ಹಾಕುವ ಸ್ವಭಾವವುಳ್ಳವುಗಳು. ವರ್ಷಾಕಾಲದಲ್ಲಿಯೂ ಮರಿಗಳನ್ನು ಹಾಕುತ್ತಿರುತ್ತವೆ. ಅವುಗಳು ಗರ್ಭವನ್ನು ೨೧ ದಿವಸ ಮಾತ್ರ ಧರಿಸುತ್ತವೆ. ಮರಿ ಹಾಕಿದ ಕೆಲವು ಗಂಟೆಗಳೊಳಗೆ ಪುನಃ ಗರ್ಭ ಧರಿಸಲೂ ಬಹುದು. ಅಂದರೆ, ಒಂದು ಜೊತೆ ಇಲಿಗಳಿಂದ ಉಂಟಾಗುವ ಸಂತತಿಯ ಲೆಖ್ಖ ಎಷ್ಟೇ ಕಡಿಮೆ ಎಂದರೂ ವರ್ಷಕ್ಕೆ ಒಂದು ಸಾವಿರಕ್ಕೇನೂ ಭಯವಿಲ್ಲ. ಹಾಗಾದಮೇಲೆ ಇವು ಸುಮಾರು ಮೂರು ವರ್ಷದಲ್ಲಿ ಸುಮಾರು ೨೫ ಕೋಟಿಯಾದಂತಾಯಿತು ತಿನ್ನುವ ವಿಷಯದಲ್ಲಿ ಒಂದು ಜೊತೆ ಇಲಿಯು ಲಂ ಕ್ವಾರ್ಟರ್ ರೊಟ್ಟಿಯನ್ನೂ ಅದರ ಸಂತತಿಯು ಅದೇ ವರ್ಷ ಅಂಥಾದ್ದೇ ೪೬,೦೦೦ ರೊಟ್ಟಿಗಳನ್ನು ಕಬಳಿಸುತ್ತವೆ.

—೧೯೨೪ ರಲ್ಲಿ ಮೊದಲನೆ ಅಮೇರಿಕಾದ ಮೋಟಾರ್ ಕಾರನ್ನು ತಯಾರಿಸಿದ ಎಲ್‌ವುಡ್ ಹೇನ್ಸ್ ರವರು ಕಾಲವಾದರು.

—ಆಸ್ಟ್ರಿಯಾ ಸರ್ಕಾರದವರು ತಮ್ಮಲ್ಲಿರುವ ಯುದ್ಧದ ೧೦೦೦೦ ಗ್ಯಾಸ್ ಬಾಂಬುಗಳನ್ನು ಏನು ಮಾಡಬೇಕೊ ತಿಳಿಯದೆ ಪೇಚಾಡುತ್ತಿರುತ್ತಾರೆ.

—ಕಲ್ಕತ್ತಾದ ಒಂದು ಕಾರ್ಖಾನೆಯ ಮಾಲೀಕರಾದ ಮಿ|| ಗಾರ್ಡ್ನರವರು ನಮ್ಮ ದಿವಾನ್‌ರವರಾದ ಮಿ|| ಬಾನರ್ಜಿಯವರ ಮತ್ತು ಪಾಟ್ಣ ಕಮಿಷನರ್ ಮಿ|| ಸ್ಟೆರವರ ವಿಷಯದಲ್ಲಿ ಅವಮಾನಕರವಾದ ಮಾತುಗಳನ್ನುಪಯೋಗಿಸಿದ್ದಕ್ಕಾಗಿ ಈ ಇಬ್ಬರು ಅವರಿಗೆ ನೋಟೀಸುಕೊಟ್ಟ ವಿಷಯವು ಈ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ. ಈಚೆಗೆ ಮಿ|| ಗಾರ್ಡ್ನರವರು ಇವರುಗಳನ್ನು ತಮ್ಮ ತಪ್ಪಿಗೆ ಕ್ಷಮಾಪಣೆ ಬೇಡಿಕೊಂಡು ಸಮಾಧಾನ ಮಾಡಿಕೊಂಡಿರುವರು.

—ಲಕ್ಷಣವಾಗಿ ಬಟ್ಟೆಬರೆಗಳನ್ನು ಧರಿಸದೇ ಬರತಕ್ಕ ಹಡಬಗಿಯರನ್ನೂ, ಸ್ತ್ರೀಯರನ್ನೂ ಕೈರೋ ಕ್ಯಾಥೊಲಿಕ್ ಚರ್ಚಿನವರು ಅಲ್ಲಿಗೆ ಸೇರಿಸುವುದಿಲ್ಲವೆಂದು ನಿರ್ಧರಿಸಿರುವರು.

—ಅಮೇರಿಕಾದ ಪ್ರಖ್ಯಾತ ಶ್ರೀಮಂತರಾದ ರಾಕ್ಫೆಲ್ಲರವರು ಜಪಾನಿನ ವಿಶ್ವವಿದ್ಯಾಲಯಕ್ಕೆ ೪೮ ಲಕ್ಷ ರೂಪಾಯಿಗಳನ್ನು ದಾನಮಾಡಿರುತ್ತಾರೆ.

—ನೇಪಾಳದ ಮಂತ್ರಿಗಳಾದ ಮಹಾರಾಜ ಚಂದ್ರ ಸೇನ ಸಮಷೇರ್ ರವರಿಗೆ ಫ್ರೆಂಚ್ ಸರ್ಕಾರದವರು ,, ಗ್ರಾಂಡ್ ಆಫೀಸರ್ ಆಫ್ ದಿ ಫ್ರೆಂಚ್ ಆರ್ಡರ್ ಆಫ್ ಆನರ್ಸ್ '' ಎಂದು ಪದವಿಯನ್ನು ಕೊಟ್ಟಿದ್ದಾರೆ.

—ಕಲ್ಕತ್ತಾ ಸೆನೇಟಿನವರು ಬಿ. ಕಾಂ, ಡಾಕ್ಟರ್ ಮತ್ತು ಎಂಜಿನೀರಿಂಗ್ ಪರೀಕ್ಷೆಗಳಲ್ಲಿ ತೇರ್ಗಡೆಯಾದವರನ್ನು ಬಿ ಎಲ್. ಪರೀಕ್ಷೆಗೆ ಸೇರಿಸಲು ಒಪ್ಪಿರುತ್ತಾರೆ.

—ಬಹರ್ಯಾಂಪುರದ ಜೈಲಿನ ರಾಜಕೀಯ ಖೈದಿಗಳು ತಮ್ಮ ನಿತ್ಯಪೂಜೆಗೆ ಬೇಕಾದ ಪೂಜಾಸಾಮಗ್ರಿಗಳನ್ನು ಜೈಲಿನ ಅಧಿಕಾರಿಗಳು ಒದಗಿಸಿಕೊಡಲಿಲ್ಲವಾಗಿ ಉಪವಾಸವ್ರತವನ್ನಾರಂಭಿಸಿದಾರೆ.

—ಗ್ವಾಲಿಯರಿನ ಮಹಾರಾಜರಾದ ಸಿಂಧ್ಯರವರಿಗೆ ಪ್ಯಾರಿಸ್ಸಿನಲ್ಲಿ ಶಸ್ತ್ರಚಿಕಿತ್ಸೆ ನಡೆದು ದಿನೇದಿನೇ ಗುಣ ಹೊಂದುತ್ತಿದ್ದಾರೆ ಗ್ವಾಲಿಯರ್ ಮಹಾರಾಣಿಯವರೂ, ರಾಜಕುಮಾರ ಜಾರ್ಜ್ ಸಿಂಧ್ಯರವರೂ, ರಾಜಕುವರಿ ಮೇರಿ ಸಿಂಧ್ಯರವರೂ ಕಳೆದ ೧೧ ನೆ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಮಾಡಿದಾರೆ.

—ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸಿನ ಸಭೆಯಲ್ಲಿ ಇನ್ನು ಮುಂದೆ ಎಂತಹ ತಕ್ಸೀರಿಗಾದರೂ ಗಲ್ಲಿಗೆ ಹಾಕುವ ಪದ್ಧತಿ ನಿಲ್ಲಿಸಬೇಕೆಂದೂ, ಹೆಚ್ಚು ಸಜಾ ಮೂತ್ರ ಹಾಕತಕ್ಕದ್ದೆಂದೂ ಒಂದು ನಿರ್ಣಯವನ್ನು ಲೇಬ್ಬರ ಪಂಗಡದವರು ತರುವವರಾಗಿರುತ್ತಾರೆ.

—ಪೂರ್ವ ಪೆರುಗ್ವೆಯಲ್ಲಿ ಒಂದು ವಿಧವಾದ ಗಿಡಗಳು ಸಿಕ್ಕಿದುತ್ತವೆ. ಈ ಗಿಡದಿಂದ ತೆಗೆಯಲ್ಪಟ್ಟ ಒಂದು ಪದಾರ್ಥವು ಸಕ್ಕರೆಗಿಂತ ೨೦೦ ರಷ್ಟು ಸಿಹಿಯಾಗಿರುತ್ತದಂತೆ

—ಪದರಾಸಿನ ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ಬ್ಯಾಂದಿ ಮಾರುತಿದ್ದರು. ಈ ಮಾರಾಟವನ್ನು ತಪ್ಪಿಸುವಂತೆ ಅಲ್ಲಿನ ಇಬ್ಬರು ಮೆಂಬರುಗಳು ತರಾವು ತಂದು ಮಂಜೂರಾಯಿತು.

—ನಮ್ಮ ಮಹಾರಾಜರವರು ಬದರಿಕಾಶ್ರಮಕ್ಕೆ ನಡೆದುಕೊಂಡೇ ಹೋಗಿ ಯಾತ್ರೆಮಾಡಿಕೊಂಡು ಬರುತ್ತಾರೆಂದು ವರ್ತಮಾನ.

—ಟರ್ಕಿಗೆ ಬಂದು ವಾಸಮಾಡುತ್ತಿರುವ ರೆಡ್‌ಕ್ರಿಸೆಂಟ್ ಸಂಘದ ಬಡಹುಡುಗರ ಉಪಯೋಗಾರ್ಥವಾಗಿ ಹೈದರಾಬಾದು ನೈಜಾಮರು ೫೦,೦೦೦ ರೂಪಾಯಿಗಳನ್ನು ದಾನಮಾಡಿರುತ್ತಾರೆ.

—ಅರ್ಕಾನ್ಸಾಸಿನ ರಿಸ್ಸೊ ಪಟ್ಟಣದಲ್ಲಿ ನಡೆದ ಮುನಿಸಿಪಲ್ ಚುನಾವಣೆಯಲ್ಲಿ ಗಂಡಸರಿಗೆ ಓಟು ಬಾರದೆ ಬರೀ ಹೆಂಗಸರೇ ಮುನಿಸಿಪಲ್ ಸಭೆಗೆ ಸಭಾಸದರಾದರು. ಸಭೆಯ ಅಧ್ಯಕ್ಷ ಸ್ಥಾನವು ಒಂದು ವಾರಪತ್ರಿಕೆಯ ಸಂಪಾದಕರಾದ ಮಿಸೆಸ್ ಮಾಡ್ ಡರ್ಕರವರು ನಿಯಮಿತರಾಗಿರುವರು.

—ಹಿಂದಿನಕಾಲದಲ್ಲಿ ರೋಮ್ ದೇಶದಲ್ಲಿ ಗಲ್ಲಿಗೆ ಹಾಕುವ ಪದ್ಧತಿಗೆ ಬದಲಾಗಿ ಅಪರಾಧಿಯನ್ನು ಸಿಂಹದಬೋನಿನೊಳಕ್ಕೆ ತಳ್ಳಿಬಿಡುತ್ತಿದ್ದರು. ಎಷ್ಟು ಕೆಲಸವು ಸಿಂಹದ್ದೇ !

—ಇಂಡಿಯಾ ದೇಶದಲ್ಲಿ ವರ್ಷಕ್ಕೆ ಸುಮಾರು ೨೧,೦೦೦ ಮರಣಗಳು ಕೇವಲ ಹಾವು ಕಡಿಯುವುದರಿಂದ ಉಂಟಾಗುತ್ತಿದೆಯಂತೆ.

TO LET

to

Permanent Advertisers

To Popularise your Business

in the Karnataka Provinces

YOU MUST ADVERTISE IN

the "SATYAVADI"

BECAUSE

It is the cheapest and most up-to-date Karnatic Weekly

It is read largely and widely

It is circulated among all grades of persons

It offers a profitable medium for advertising

Advertisement in this Paper is a good investment

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column measures about 13"×2½". 3columns to a page. Voucher copy supplied free.

All communications & remittances to be addressed to

The Manager,
SATYAVADI Office,
Mysore, S. India.

THE

MYSORE PRESS

RAMAVILAS ROAD

MYSORE

We undertake to print

JOBS — BOOKS & PERIODICALS

Neat Workmanship

Moderate Charges

Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿ ಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್
927 ಚಾಮರಾಜ ಪುರಂ, ಮೈಸೂರು.

ಕಾದಂಬರೀ ಸಂಗ್ರಹ

ಮನೋಹರವಾದ ಕರ್ನಾಟಕ ಮಾಸಪತ್ರಿಕೆ

ಚಾಮರಾಜನಗರ

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!

ನಮ್ಮ ಅಕ್ಷರವು ಬಲು ಚೆಲುವ!!

ನಮ್ಮ ಕೆಲಸ ನೋಡುವವರಿಗೆ

ನೇತ್ರಾನಂದ

ಬಿ. ಎಸ್. ಮೂರ್ತಿ, ಬಿ.
ಪ್ರೊಪ್ರೈಟರ್.

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ, ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ, ಪದಾರ್ಥಗಳು ನಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕೊಳ್ಳಬೇಕಾಗಿ ಪ್ರಾರ್ಥನೆ. [22-5]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿಗಳು, ಮೈಸೂರು

Printed and Published by B.S.Murthy, B. at the Mysore Press, Mysore, for the Ed and Proprietor.